(ಇಂದು ದಿನಾಂಕಃ **01/08/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**<u>ಮುಂದುವರೆದ ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ಎಸ್.ಆರ್.ಪಿ. ವಕೀಲರಿಂದಃ-</u>**

4. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ನಾನು ಹಾಜರುಮಾಡಿದ ವಿಚಾರಣಾ ಆರ್ಡರ ಶೀಟ ನಕಲನ್ನು ನಿಆರ್-1, ಆಪಾದನಾ ಪತ್ರವನ್ನು ನಿಆರ್-2, ನೌಕರನ ವಿರುದ್ಧ ದ ವಿಚಾರಣಾ ವಿವರಗಳನ್ನು ನಿಆರ್-3 ಮತ್ತು 4, ಅಂಚೆ ದಾಖಲೆಯ ಪ್ರತಿಗಳನ್ನು ನಿಆರ್-5 ಮತ್ತು 6, ವಿಚಾರಣಾಧಿಕಾರಿ ನೇಮಕ ಆದೇಶವನ್ನು ನಿಆರ್-7, ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿ ಬದಲಾವಣೆ ದಾಖಲೆಯನ್ನು ನಿಆರ್-8, ತಿಳುವಳಿಕೆ ಪತ್ರಗಳನ್ನು ನಿಆರ್-9 ಮತ್ತು 10, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್-11, ವಿಚಾರಣಾ ತಿಳುವಳಿಕೆ ಪತ್ರವನ್ನು ನಿಆರ್-12, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್-13, 6 ತಿಳುವಳಿಕೆ ಪತ್ರಗಳನ್ನು ನಿಪಿ-14 ರಿಂದ 19, ಪ್ರಾಥಮಿಕ ವಿಚಾರಣಾ ವರದಿಯನ್ನು ನಿಆರ್-20, ಹಾಜರಾತಿ ವಿವರಗಳನ್ನು ನಿಆರ್-21, ಎರಡು ತಿಳುವಳಿಕೆ ಪತ್ರ ಹಾಗೂ ವಿಚಾರಣೆಯ ಎರಡು ವಿವರಗಳನ್ನು ನಿಆರ್-22 ರಿಂದ 25, ಅರ್ಜಿದಾರನ ಮನವಿ ಪತ್ರವನ್ನು ನಿಆರ್-26, ವೈದ್ಯಕೀಯ ಪ್ರಮಾಣ ಪತ್ರ ಮತ್ತು ಔಷಧಿ ಹಾಗೂ ಸಲಹೆ ಚೀಟಿಗಳನ್ನು ನಿಆರ್-27, ಇನ್ನೊಂದು ವೈದ್ಯಕೀಯ ಪ್ರಮಾಣ ಪತ್ರವನ್ನು ನಿಆರ್-28, ವಿಚಾರಣಾ ವರದಿಯನ್ನು ನಿಆರ್-29, ಸೇವೆಯಿಂದ ವಜಾಮಾಡಿಗೊಳಿಸಿದ ಆದೇಶವನ್ನು ನಿಆರ್-30, ನೋಟೀಸ ಪ್ರತಿಯನ್ನು ನಿಆರ್-31, ಅಂಚೆ ಸ್ವೀಕೃತಿ ಪತ್ರಗಳನ್ನು ನಿಆರ್-32 ಮತ್ತು 33, ಅರ್ಜಿದಾರನ ಮನವಿ ಪತ್ರಗಳನ್ನು ನಿಆರ್-34 ಮತ್ತು 35, ಅನುಮತಿ ಪತ್ರವನ್ನು ನಿಆರ್-36, ಕಾರಣ ಕೇಳುವ ನೋಟೀಸಗಳನ್ನು ನಿಆರ್-37 ಮತ್ತು 38, ವಾಪಾಸು ಬಂದ ಅಂಚೆ ಕವರನ್ನು ನಿಆರ್-39 (ಕವರನ್ನು ತೆರೆದ ನ್ಯಾಯಾಲಯದಲ್ಲಿ ತರೆದು ಅದರಲ್ಲಿಯ 2 ನೋಟೀಸಗಳನ್ನು ನಿಪಿ-39(ಎ ಮತ್ತು ಬಿ) ಎಂದು ಗುರುತಿಸಲಾಯಿತು.), ಸೀರಿಯಲ್ ಅರ್ಜಿ ಮೇಲಿನ ಆದೇಶದ ಪ್ರತಿಯನ್ನು ನಿಆರ್-40 ಮತ್ತು ಹಾಜರಾತಿ ವಿವರಗಳನ್ನು ನಿಆರ್-41 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಂ.ಎನ್.ಪಿ. ವಕೀಲರಿಂದಃ-</u>**

5. ಎಸ್.ಎನ್.ಹಜಾರೆ ಎನ್ನುವವರು ವಿಚಾರಣಾ ಅಧಿಕಾರಿಯಾಗಿದ್ದರು. ನಾನು ವಿಚಾರಣೆಯಲ್ಲಿ ಭಾಗವಹಿಸಿಲ್ಲ. ನಿಆರ್-1 ರಲ್ಲಿ ಮೊದಲನೇ ಪುಟದಲ್ಲಿ ಮೊದಲನೇ ದಿನಾಂಕ ತಿದ್ದುಪಡಿಯಾಗಿದೆ ಎನ್ನುವುದು ನಿಜ. ವಿಚಾರಣೆ ದಿನಾಂಕವನ್ನು ಅರ್ಜಿದಾರರಿಗೆ ಅಂಚೆ ಮೂಲಕ ತಿಳಿಸಲಾಗಿದೆ. ನಿಆರ್-1 ರಲ್ಲಿ ಅಂಚೆ ಮೂಲಕ ನೋಟೀಸು ಕೊಟ್ಟ ಬಗ್ಗೆ ಬರೆದಿಲ್ಲ. ದಿನಾಂಕಃ30/11/2016 ರಂದು ವಿಚಾರಣಾಧಿಕಾರಿ ಆರ್ಡರಶೀಟಗೆ ಸಹಿ ಮಾಡಿಲ್ಲ ಎನ್ನುವುದು ನಿಜ. ನಿಆರ್-1 ಅಪೂರ್ಣ ದಾಖಲೆ ಎನ್ನುವುದು ಸುಳ್ಳು.

6. ತನ್ನ ಅನಾರೋಗ್ಯದ ದಾಖಲೆಗಳನ್ನು ಅರ್ಜಿದಾರ ವಿಚಾರಣಾಧಿಕಾರಿಗೆ ಸಲ್ಲಿಸಿದ್ದ ಎನ್ನುವುದು ಸುಳ್ಳು. ವಿಚಾರಣಾಧಿಕಾರಿ ಸದರಿ ದಾಖಲೆಯನ್ನು ಪರಿಶೀಲಿಸಿಲ್ಲ ಎನ್ನುವುದು ಸುಳ್ಳು. ಅರ್ಜಿದಾರ ಆಪಾದನೆಗೆ ಉತ್ತರ ನೀಡಿ ದಾಖಲೆ ಸಲ್ಲಿಸಿದ್ದಾನೆ ಎನ್ನುವುದು ನಿಜ. ನಿಆರ್-27 ಮತ್ತು 28 ಅರ್ಜಿದಾರನ ವೈದ್ಯಕೀಯ ಪ್ರಮಾಣ ಪತ್ರದ ದಾಖಲೆ ಎನ್ನುವುದು ನಿಜ. ಅರ್ಜಿದಾರನ ಗೈರು ಹಾಜರು ಉದ್ದೇಶಪೂರ್ವಕ ಅಲ್ಲ ಎನ್ನುವುದು ಸುಳ್ಳು. ಮೂಲ ಹಾಜರಾತಿ ಪುಸ್ತಕವನ್ನು ಆಧರಿಸಿ ನಿಆರ್-41 ನ್ನು ನೀಡಲಾಗಿದೆ. ಮೂಲ ದಾಖಲೆ ಹಾಜರುಮಾಡಲು ತೊಂದರೆ ಇಲ್ಲ ಎನ್ನುವುದು ಸುಳ್ಳು. ನಿಆರ್-41 ನ್ನು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸುಳ್ಳು. ಅರ್ಜಿದಾರ ಆಪಾದನೆಗೆ ಉತ್ತರ ನೀಡಿರುತ್ತಾನೆ ಮತ್ತು ನೀಡಿರುವುದಿಲ್ಲ ಎಂದು ನಿಆರ್-7 ರಲ್ಲಿ ಬರೆಯಲಾಗಿದೆ ಎನ್ನುವುದು ನಿಜ. ಸಂಸ್ಥೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಅರ್ಜಿದಾರನಿಗೆ ಸರಿಯಾದ ಅವಕಾಶ ನೀಡಿಲ್ಲ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.